# ನಾಂದಿಪದ



ದೂರದ ಊರಿಗೆ ಈಗಿನ ಕಾಲದಲ್ಲಿ ರಾತ್ರಿ ಬೆಳಗಾಗುವುದರ ಒಳಗೆ ಹೋಗಿ ಮುಟ್ಟಬಹುದು. ದೂರದ ಒಬ್ಬ ವ್ಯಕ್ತಿಯೊಂದಿಗೆ ಮಾತನಾಡಬೇಕೆಂದರೂ ಹಾಗೆಯೇ. ಕೈಯಲ್ಲಿದ್ದ ಸೆಲ್‌ಫೋನ್ ಆ ಕೆಲಸಕ್ಕೆ ತಕ್ಷಣ ನೆರವಾಗುತ್ತದೆ. ಸಂಪರ್ಕ ಇಂದು ಸುಲಭ, ಸರಳ. ಜನರಿಂದ ಅಷ್ಟೇ ದೂರವಾಗಿಯೂ ಇಡುತ್ತದೆ. ಇ–ಮೇಲ್ ಯುಗದಲ್ಲಿ ನಮಗೆ ಕೈಬರಹಗಳ ಪತ್ರಗಳು ಬರುವುದು ತೀರ ಕಡಿಮೆಯಾಗಿದೆ. ಜನರನ್ನು ಬೆಸೆಯುವ ಸಾಮಾಜಿಕ ಜಾಲ ತಾಣಗಳಲ್ಲಿ ಸ್ವಪ್ರತಿಷ್ಠೆಯ, ಸ್ವಮೋಹದ ಮನುಷ್ಯರು ತುಂಬಿದ್ದಾರೆ; ಅಲ್ಲಿ ಸಮಾಜವೇ ಇಲ್ಲ. ಮನುಷ್ಯ ಮನುಷ್ಯರನ್ನು, ಮನುಷ್ಯನ ಒಳಜಗತ್ತನ್ನು ಹೊರಜಗತ್ತಿನೊಂದಿಗೆ ಬೆಸೆಯುವ ತಂತುವೊಂದು ಸದ್ದಿಲ್ಲದೆ, ಯಾವುದೇ ಸುಳಿವು ಕೊಡದೇ ಸರಿದುಹೋಗಿದೆ.

ಹೊಳೆಯ ದಡದಲ್ಲಿ ನಿಂತು ಆಚಿನ ದಂಡೆಯನ್ನು ಮುಟ್ಟಲು ದೋಣಿ, ಲಾಂಚು, ಹರಿಗೋಲಿಗಾಗಿ ಕಾಯುತ್ತಿದ್ದ ಕಾಲವೊಂದಿತ್ತು. ನಮ್ಮನ್ನು ನೀರಿನ ಮೇಲಿಂದ ದಾಟಿಸುವ ಆ ಮಾಂತ್ರಿಕ ಸಾರಿಗೆಗಳ ವಾಸನೆ, ಸವೆದ ಹಲಗೆ, ಜನರ ಜೊತೆಗೇ ದಾಟುವ ಕೋಳಿ, ಕುರಿ, ಮೇಕೆ, ಹುಲ್ಲಿನ ಹೊರೆಗಳು ಕಣ್ಮರೆಯಾಗಿವೆ; ಅಂಬಿಗನ 'ಹಗೂರಕೆ ಹತ್ತಿ, ಅಲೆಗಳು ಏಳುವ ಮೊದಲು ಮುಟ್ಟುವ' ಎಂಬ ಮಾತುಗಳು ಕೇಳಿಸುತ್ತಿಲ್ಲ. ಆ ಹೊಳೆಗಳಿಗೆ ಸಂಕಗಳು ಬಂದಿವೆ. ನಾವು ಕೊಂಚ ನಿಧಾನಿಸಿದ್ದರೆ ಒಳಗೊಳ್ಳಬಹುದಾದ ಅಪೂರ್ವ ಲೋಕವೊಂದು ನೋಡನೋಡುತ್ತಲೆ ನಮ್ಮ ಬೆರಳ ಸಂದಿಯಿಂದ ಜಾರಿದೆ. ಇದೆಲ್ಲ ನಮ್ಮ ಶ್ರಮಬಲ್ಲದ, ಅವಸರದ ಬದುಕಿನಿಂದ ಆದದ್ದು. ಹತ್ತಿರದ ದೂರವನ್ನೂ ಬೇಗ ಮುಟ್ಟಬೇಕೆನ್ನುವ, ಗುರಿ ಮುಟ್ಟುವವರೆಗೆ ನಿಲ್ಲದಿರು ಎಂಬ ಮನಃಸ್ಥಿತಿಯಿಂದ ಬಂದದ್ದು. ಹಲವು ಮೋಹಪಾಶಗಳನ್ನು, ಮರುಳುಗೊಳಿಸುವ ಕ್ಷಣಭಂಗುರ ಸುಖಗಳನ್ನು ಮನುಷ್ಯನ ಕಣ್ಣಿನ ಮುಂದೆ ಎಸೆಯುತ್ತಲೇ ಇರುವ ಆಧುನಿಕ ಜಗತ್ತಿಗೆ ಎತ್ತ ಹೊರಟಿದ್ದೇನೆ ಎಂಬ ಅರಿವಿಲ್ಲ. ಸಹಜೀವಿಗಳ ಸಂಕಟ, ನಿಟ್ಟುಸಿರುಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಕಾಣದ ಗುರಿಯತ್ತ ಅದು ಸಾಗಿದೆ. ಅಭಿವೃದ್ಧಿ, ಸಂಪತ್ತು, ಎತ್ತರದ ಜೀವನಮಟ್ಟ ಎಂಬ ಪದಗಳನ್ನು ಉದುರಿಸುತ್ತ ಸುಧಾರಣೆಯ ಹಣೆಪಟ್ಟಿ, ಕಣ್ಣಿನಪಟ್ಟಿ ಹಚ್ಚಿಕೊಂಡಿರುವ ಹುಚ್ಚುಕುದುರೆಯ ಓಟ ಎತ್ತಲೋ ಹೊರಟಿದೆ.

ಒಂದೆರಡು ಗಿಡಮರಗಳನ್ನು ನೆಡದವರು, ಹಸು, ಬೆಕ್ಕು, ನಾಯಿಗಳನ್ನು ಸಾಕದವರು, ಮಣ್ಣಿನ ಒಡನಾಟ ಇಲ್ಲದವರು ನಮ್ಮ ನಡುವೆ ಇದ್ದಾರೆ. ಇಂತಹವರಿಗೆ ಸುತ್ತಣ ಜೀವಜಗತ್ತಿನ ದನಿಗಳು ಕೇಳಿಸಲಾರವು; ಸ್ವತಃ ಅವರ ಎದೆಯ ಮಿಡಿತ ಸಹ ಅರಿವಿಗೆ ಬರದು. ಮಣ್ಣು ಎಂಬುದು ಮುಂದಿನ ತಲೆಮಾರಿಗೆ, ಬದುಕಿಗೆ ಕೂಡಿಡುವ ಆಸ್ತಿಯಾಗಿ ಎಂದೋ ಬದಲಾಗಿದೆ. ಅದು ಜೀವಗಳನ್ನು ಚಿಗುರಿಸುವ, ಪೊರೆವ ಚೈತನ್ಯದಾಯಿ ತಾಣವಾಗಿ ಅನೇಕರಿಗೆ ಕಾಣುತ್ತಿಲ್ಲ. ಜೀವಜಗತ್ತಿನೊಂದಿಗಿನ ನಮ್ಮ ಸಂಪರ್ಕ ನಮ್ಮ ಭಾವಲೋಕವನ್ನು, ಅಂತರಂಗದ ಸಂಪತ್ತನ್ನು, ಎಲ್ಲ ಕಲೆ, ಶೋಧನೆಗಳ ಮೂಲದ್ರವ್ಯವಾದ ಅಂತಃಕರಣವನ್ನು ಬೆಳೆಸುತ್ತದೆ, ವಿಸ್ತರಿಸುತ್ತದೆ. ಇದೆಲ್ಲ ಬರಿದಾದವರು ಈ ಲೋಕದಲ್ಲಿ ಹೊಸದೇನನ್ನೂ ಸೃಷ್ಟಿಲಾರರು.

ಹತ್ತಾರು ಬರಹಗಾರರು ಈ ಸಂಚಿಕೆಗೆ ಬರೆದಿದ್ದಾರೆ. ಬದುಕಿನ ಹೊಸ ಸ್ಪಂದನೆಯ, ಗ್ರಹಿಕೆಯ, ಅದಕ್ಕೂ ಮುಖ್ಯವಾಗಿ ಈ ಕಾಲಮಾನದ ಕತೆಗಳು ಓದುಗರನ್ನು ಮುದಗೊಳಿಸುತ್ತವೆ ಎಂಬುದು ನಮ್ಮ ನಿರೀಕ್ಷೆ.

**ಸಂದೀಪ ನಾಯಕ**